Rajajinagar, Bangalore.

7. Gulshan, Home for the Blind,
   A-51, Gulmohar park, New Delhi.
8. Lal Bahadur Mountaining Institute,
   Shastri Bhavan, No.8, Susheela Road,
   Chikkamavalli, Bangalore.
9. Defence Publication Services,
   Post Box No. 5760, 3/6, SRTN,
   New Delhi.
10. Kannada Vishwa Bharathi,
    Publications, Hubli.
11. Indian Express, Madhurai Pvt. Ltd.,
    1 Queens Road, Banglore.

1990-91ನೇ ಸಾಲಿನಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುದ್ದೀಕರಿಸಲು ನಿಗಧಿ ಪಡಿಸಿದ ಗುರಿ.

3273 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *1990-91ನೇ ಸಾಲಿನಲ್ಲಿ ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಲು ನಿಗಧಿಪಡಿಸಿದ್ದ ಗುರಿ ಎಷ್ಟು?*

ಆ) *ಇವುಗಳಲ್ಲಿ ಈ ಅವಧಿಯಲ್ಲಿ ಎಷ್ಟು ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ?*

ಇ) *ವಿದ್ಯುದ್ದೀಕರಣಕ್ಕಾಗಿ ಬಾಕಿ ಇರುವ ಸಂಖ್ಯೆ ಎಷ್ಟು?*

ಈ *1991-92ನೇ ಸಾಲಿನಲ್ಲಿ ಎಷ್ಟು ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲು ಉದ್ದೇಶಿಸಲಾಗಿದೆ?*

ಉ) *ಜುಲೈ 1991ರ ಅಂತ್ಯದ ವರೆವಿಗೆ ವಿದ್ಯುದ್ದೀಕರಿಸಿದ ಸಂಖ್ಯೆ ಎಷ್ಟು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) 1990-91ನೇ ಸಾಲಿನಲ್ಲಿ 60,000 ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸುವ ಗುರಿಯನ್ನು ನಿಗಧಿ ಪಡಿಸಲಾಗಿದೆ.

ಆ) ಈ ಅವಧಿಯಲ್ಲಿ 69,607 ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಿದೆ.

ಇ) 1990-91ನೇ ಸಾಲಿನಲ್ಲಿನ ಮಾಡಿದ ಸಾಧನೆಯು ನಿಗದಿಪಡಿಸಲಾದ ಗುರಿಗಿಂತಲೂ ಹೆಚ್ಚಾಗಿದೆ.

ಈ) 1991-92ನೇ ಸಾಲಿನಲ್ಲಿ 60,000 ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಲು ಉದ್ದೇಶಿಸಲಾಗಿದೆ.

ಉ) ಜುಲೈ 1991ರ ಅಂತ್ಯದ ವರೆಗೆ 12,453ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲಾಗಿದೆ.

3277 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) *ಬೆಂಗಳೂರು ನಗರದಲ್ಲಿ ಗಣಕೀಕರಣ ವ್ಯವಸ್ಥೆ ಹೊಂದಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳು ಯಾವುವು.*

2) *ಪ್ರಸ್ತುತ ಸಾಲಿನಲ್ಲಿ ಗಣಕೀಕರಣ ವ್ಯವಸ್ಥೆಯನ್ನು ಆಳವಡಿಸಲು ಉದ್ದೇಶಿತ ಕಛೇರಿಗಳು ಯಾವುವು?*

3) *ಈ ಗಣಕೀಕರಣ ಯಂತ್ರದಿಂದ ಪ್ರತಿನಿತ್ಯ ಸರಾಸರಿ ನೀಡುವ ಲೈಸೆನ್ಸ್ ಎಷ್ಟು ಮತ್ತು ನೇರವಾಗಿ (ಗಣಕೀಕರಣ ಯಂತ್ರದ ಮೂಲಕವಲ್ಲದೆ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಯಶವಂತಪುರದ ಕಛೇರಿಯಲ್ಲಿ ಎಷ್ಟು?*

4) *ಈ ಗಣಕೀಕರಣದ ಯಂತ್ರದ ಮೂಲಕ ಅಭ್ಯರ್ಥಿಗಳಿಗೆ ಕನ್ನಡದಲ್ಲಿಯೇ ಪ್ರಶ್ನೆ ಕೇಳಲಾಗುತ್ತಿದೆಯೇ?*

5) *ಇಲ್ಲದಿದ್ದಲ್ಲಿ, ಸರ್ಕಾರ ಈ ಯಂತ್ರದ ಮೂಲಕ ಪ್ರಶ್ನೆ ಕೇಳಲು ಕ್ರಮ ಕೈಗೊಂಡಿದೆಯೇ?*

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

1) ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಯಶವಂತಪುರ)). ಇಂದಿರಾನಗರ, ಕೋರಮಂಗಲ.

2) ಪ್ರಾದೇಶಿಕ ಸಾರಿಗೆ ಕಛೇರಿ, ಮೈಸೂರು ಬೆಂಗಳೂರು (ಜಯನಗರ), ಧಾರವಾಡ ಮತ್ತು ಮಂಗಳೂರು.

3)

ಗಣಕೀಕರಣ ಮೂಲಕ	ನೇರವಾಗಿ
-23-	-46-

4) ಸದ್ಯಕ್ಕಿಲ್ಲ.

5) ಹೌದು, ಎರಡೂ ಬಾಷೆಗಳಲ್ಲಿ.

ಬೆಂಗಳೂರಿನಲ್ಲಿ 1991ನೇ ಜುಲೈ ಅಂತ್ಯದವರೆಗೆ ವಿದ್ಯುತ್‌ಚ್ಛಕ್ತಿ ಗೃಹ ಮತ್ತು ಗೃಹೇತರ ಬಳಕೆದಾರರ ಸಂಖ್ಯೆ.

3276 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕ ಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಬೆಂಗಳೂರಿನಲ್ಲಿ 1991ನೇ ಜುಲೈ ಅಂತ್ಯದವರೆಗಿರುವ ವಿದ್ಯುಚ್ಛಕ್ತಿ ಗೃಹ ಮತ್ತು ಗೃಹೇತರ ಬಳಕೆದಾರರ ಸಂಖ್ಯೆ ಎಷ್ಟು?*

ಆ) *ಬೆಂಗಳೂರು ನಗರದಲ್ಲಿ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಗಣಕ ಯಾಂತ್ರೀಕರಿಸುವ ಪ್ರಸ್ತಾವವೇನಾದರೂ ಇದೆಯೇ?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಜುಲೈ 1991ನೇ ಅಂತ್ಯದವರೆಗಿನ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

1) ಗೃಹ ಬಳಕೆದಾರರು...7,36,503

2) ಗೃಹೇತರ ಬಳಕೆದಾರರು ...2,03,663